ಅ) ಸದರಿ ಘಟಕದಲ್ಲಿ ರೋಗಿಗಳ ಸಂಖ್ಯೆ ಎಷ್ಟು ?

ಇ) ಕೆ. ಎಂ. ಸಿ. ಆಸ್ಪತ್ರೆಯಲ್ಲಿ ಸಲಹಾ ಸಮಿತಿ ಇದೆಯೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಇಲ್ಲ.

ಆ) ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜ್ ಆಸ್ಪತ್ರೆಯು ಸಾರ್ವಜನಿಕ ಆಸ್ಪತ್ರೆಯಾಗಿದ್ದು, ಇಲ್ಲಿ ಪ್ರತ್ಯೇಕ ಕ್ಯಾನ್ಸರ್ ಘಟಕವಿಲ್ಲದಿರುವುದರಿಂದ ಕ್ಯಾನ್ಸರ್ ರೋಗಿಗಳಿಗೆ ಶಸ್ತ್ರಚಿಕಿತ್ಸೆ ಮತ್ತು ವೈದ್ಯಕೀಯ ವಿಭಾಗಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ೫೫೪, ೬೦೩ ಮತ್ತು ೬೩೩ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

ಇ) ಇಲ್ಲ.

ರಾಜ್ಯದಲ್ಲಿ ರ್ಯಾಗಿಂಗ್ ಅನ್ನು ದಮನ ಮಾಡುವ ಬಗ್ಗೆ

೧೬೬(೧೬೭ ಬಿ. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, (ಅಥಣಿ).—ಮಾನ್ಯ ಗೃಹ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ವರ್ಷ ದಾವಣಗೆರೆಯಲ್ಲಿ ರ್ಯಾಗಿಂಗ್ ಮತ್ತೆ ತಲೆ ಎತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ ೨ ವರ್ಷಗಳಲ್ಲಿ ಈ ಪಿಡುಗಿಗೆ ಬಲಿಯಾದ ಹಾಗೂ ದುರಂತಕ್ಕೆ ಒಳಪಟ್ಟ ಪ್ರಕರಣಗಳು ಎಷ್ಟು ? ಇದನ್ನು ತಡೆಗಟ್ಟಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಇ) ನೆರೆ ರಾಜ್ಯವಾದ ಕೇರಳದಲ್ಲಿ ರ್ಯಾಗಿಂಗ್ ತಡಗಟ್ಟುವ ಬಗ್ಗೆ ವಿಷೇಷ ಅಧಿನಿಯಮ ಒಂದನ್ನು ರಚಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ರಾಜ್ಯದಲ್ಲಿಯೂ ಈ ಪಿಡುಗನ್ನು ಹತ್ತಿಕ್ಕಲು ವಿಶೇಷ ಶಾಸನ ಒಂದನ್ನು ರಚಿಸಲು ಸರ್ಕಾರದವರು ಯೋಚಿಸುತ್ತಿರುವರೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಬಂದಿದೆ.

ಆ) ೧೯೮೫ರಲ್ಲಿ ೪ ಪ್ರಕರಣಗಳು ಮತ್ತು ೧೯೮೬ ರಲ್ಲಿ ೩ ಪ್ರಕರಣಗಳು ವರದಿಯಾಗಿರುತ್ತವೆ. ಈ ಪಿಡುಗನ್ನು ತಡೆಗಟ್ಟುವ ಸಲುವಾಗಿ ಸಂಶಯಾತ್ಮಕ ವ್ಯಕ್ತಿಗಳ ಮೇಲೆ ವಿಶೇಷ ನಿಗಾ ಇರಿಸುವಂತೆಯೂ ಮತ್ತು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ನೇರವಾಗಿ ಸಂಬಂಧ ಪಟ್ಟವರಿಗೆಲ್ಲಾ ತಿಳುವಳಿಕೆಯನ್ನು ನೀಡಲಾಗಿದೆ.

ಇ) ಇಲ್ಲ.

ಈ) ಇಲ್ಲ.

ಕನ್ನಡ ಕಾವಲು ಸಮಿತಿಯ ಖರ್ಚಿನ ವಿವರ ಕುರಿತು

೧೬೭(೧೭೮) ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕನ್ನಡ ಕಾವಲು ಸಮಿತಿಯು ರಚನೆ ಆದದ್ದು ಯಾವಾಗ, ಮತ್ತು ಸದಸ್ಯರ ಸಂಖ್ಯೆ ಎಷ್ಟು ?

ಆ) ಈವರೆಗೆ ಕಾವಲು ಸಮಿತಿಯ ಅಧ್ಯಕ್ಷರು ವಿವಿಧ ಜಿಲ್ಲೆಗಳಲ್ಲಿ ಮಾಡಿದ ಪ್ರವಾಸ ಎಷ್ಟು, ಕರೆದ ಸಭೆಗಳೆಷ್ಟು ?

ಇ) ಗೌರವಧನ ಮತ್ತು ಪ್ರವಾಸ ಭತ್ಯೆ ಎಂದು ಕಾವಲು ಸಮಿತಿಯ ಅಧ್ಯಕ್ಷರು ತೆಗೆದುಕೊಂಡ ಹಣ ಎಷ್ಟು ?

ಈ) ಸಮಿತಿಯ ಸದಸ್ಯರಿಗೆ ಗೌರವಧನ ಮತ್ತು ಪ್ರವಾಸ ಭತ್ಯೆ ಸಂದಾಯವಾದದ್ದೆಷ್ಟು (ವಿವರ ತಿಳಿಸುವುದು) ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿಯನ್ನು ದಿನಾಂಕ : ೨೬-೮-೧೯೮೫ ರಲ್ಲಿ ಪುನರ್‌ರಚಿಸಲಾಯಿತು. ಪ್ರಸಕ್ತ ೧೪ ಜನ ಸದಸ್ಯರಿದ್ದಾರೆ.

ಆ) ಪ್ರವಾಸ ೧೪೦, ಕರೆದ ಸಭೆಗಳು ೨೦೦.

ಇ) ಅಧ್ಯಕ್ಷರು ಗೌರವ ಧನ ಪಡೆಯುತ್ತಿಲ್ಲ, ಇಲ್ಲಿಯವರೆವಿಗೆ ಪಡೆದಿರುವ ಪ್ರವಾಸ ಭತ್ಯೆ ರೂ. ೭೭,೬೦೨-೫೦ ಗಳು.

ಈ) ಸದಸ್ಯರುಗಳು ಗೌರವ ಧನ ಪಡೆಯುತ್ತಿಲ್ಲ. ಪ್ರವಾಸ ಭತ್ಯೆ ರೂ. ೩೨,೫೫೬-೧೦ ಗಳು, (ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ).

ವಿಧಾನ ಸಭಾ ಸದಸ್ಯ ಶ್ರೀ ಬಾಬುರೆಡ್ಡಿ ತುಂಗಳ್-ಇವರ ಚುಕ್ಕೆ ಗುರುತಿನ ಪ್ರಶ್ನೆ ೧೨೮ ರ (ಈ) ಕನ್ನಡ ಕಾವಲು ಮತ್ತು ಗಡಿಸಲಹಾ ಸಮಿತಿ ಸದಸ್ಯರಿಗೆ ಪಾವತಿ ಮಾಡಿರುವ ಪ್ರವಾಸ ಭತ್ಯೆ.

ಅನಬಂಧ

			ರೂ. ಪೈ.
೧.	ಶ್ರೀ ಎಂ. ವೀರಪ್ಪ ಮೊಯಿಲಿ.	...	೫,೮೯೭-೬೦
೨.	ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು	...	೧೬೦-೮೦
೩.	ಶ್ರೀ ಗೋರೂರು ರಾಮಸ್ವಾಮಿ ಐಯಂಗಾರ್.	...	೩೩೦-೦೦
೪.	ಶ್ರೀ ಕೊ. ಚೆನ್ನಬಸಪ್ಪ.	...	೪೪೦-೦೦
೫.	ಶ್ರೀ ಕೆ. ಎಸ್. ನಿಸಾರ್ ಅಹಮದ್	...	೨೫೦-೦೦
೬.	ಶ್ರೀ ಪಿ. ಕೆ. ಭಾಗೋಜಿ.	...	೩,೫೪೦-೦೦
೭.	ಶ್ರೀ ಜಿ. ನಾರಾಯಣ.	...	೭೩೦-೦೦
೮.	ಶ್ರೀ ಜಿ. ನಾರಾಯಣ ಕುಮಾರ್.	...	೨೦೦-೦೦
೯.	ಶ್ರೀ ಮಹದೇವ ಬಣಕಾರ್.	...	೬,೯೩೯-೦೦
೧೦.	ಶ್ರೀ ಎಸ್. ಕೆ. ಪೈ.	...	೨,೫೯೭-೫೦
೧೧.	ಶ್ರೀ ಕಯ್ಯಾರ ಕಿಞಣ್ಣ ರೈ.	...	೪,೪೯೬-೦೦
೧೨.	ಶ್ರೀ ಚೆನ್ನವೀರ ಕಲ್ಯಾಣ ಶೆಟ್ಟಿ.	...	೩,೮೭೧-೦೦
೧೩.	ಶ್ರೀ ಕಲ್ಲಪ್ಪ ಹೊರ್ತೀಕರ್.	...	೨,೯೪೫-೦೦
೧೪.	ಶ್ರೀ ಸಿದ್ಧಲಿಂಗಯ್ಯನವರು.	...	೧೬೦-೦೦
			೩೨,೫೫೬-೧೦